ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು

347 (826) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಪ್ರಸ್ತುತ ಭಾರಿ ಮತ್ತು ಮಧ್ಯಮ ನೀರಾವರಿ ವ್ಯಾಪ್ತಿಯೊಳಗೆ ಎಷ್ಟು ಲಕ್ಷ. ಹೆ. ಪ್ರದೇಶಗಳನ್ನು ನೀರಾವರಿ ವ್ಯವಸ್ಥೆಗೆ ತರಲಾಗಿದೆ; ಮುಂದಿನ ವರ್ಷಗಳಲ್ಲಿ ಎಷ್ಟು ಲಕ್ಷ ಹೆ. ಪ್ರದೇಶಗಳನ್ನು ನೀರಾವರಿಗೆ ಒಳಪಡಿಸುವ ಯೋಜನೆಯನ್ನು ರೂಪಿಸಲಾಗಿದೆ;

ಆ) ರಾಜ್ಯದಲ್ಲಿ ನೀರಾವರಿಗಾಗಿ ಬಳಸಬಹುದಾದ ಜಲ ಸಂಪನ್ಮೂಲಗಳ ಸಾಮರ್ಥ್ಯ ಲಭ್ಯತೆಯ ಪ್ರಮಾಣವೆಷ್ಟು?

ಇ) ಕಳೆದ ಮೂರು ವರ್ಷಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ವಿನಿಯೋಗಿಸಿದ ಹಣವೆಷ್ಟು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ರಾಜ್ಯದಲ್ಲಿ ಪ್ರಸ್ತುತ ಭಾರಿ ಮತ್ತು ಮಧ್ಯಮ ನೀರಾವರಿ ವ್ಯಾಪ್ತಿಯೊಳಗೆ 25.20 ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಟಿಸಲಾಗಿದೆ. ಮುಂದಿನ ವರ್ಷಗಳಲಿ 9.80 ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಟಿಸಿರುವ ಗುರಿ ಹೊಂದಲಾಗಿದೆ.

ಆ) ರಾಜ್ಯದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ 1243.27 ಟಿ.ಎಂ.ಸಿ. ಜಲ ಸಂಪನ್ಮೂಲ ಲಭ್ಯವಿರುತ್ತದೆ.

ಇ) ಕಳೆದ ಮೂರ ವರ್ಷಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ರೂ. 8,846.07 ಕೋಟಿಗಳನ್ನು ವಿನಿಯೋಗಿಸಲಾಗಿದೆ.

ಬಾಕಿ ಉಳಿದಿರುವ ಯೋಜನೆಗಳು

343 (828) ಶ್ರೀ ಗೋಪಾಲಕೃಷ್ಣ ಎನ್. ವೈ. (ಮೊಳಕಾಲ್ಮೂರು): ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದ ಅರಣ್ಯ ಪ್ರದೇಶದಲ್ಲಿ ವಿದ್ಯುತ್ ಯೋಜನೆಗಳೂ ಸೇರಿದಂತೆ ಇತರೆ ಯಾವ ಯಾವ ಯೋಜೆನೆಗಳು ಅರಣ್ಯ ಇಲಾಖೆಯ ಅನುಮತಿಗಾಗಿ ಬಾಕಿ ಉಳಿದಿವೆ (ಯೋಜನೆವಾರು ಬಾಕಿ ಇರುವ ದಿನಾಂಕವಾರು ವಿವರಗಳನ್ನು ನೀಡುವುದು);